ಓ.ಎಸ್. ನಂ. 14/2018 ಪಿ.ಡಬ್ಲೂಃ 1

ದಿನಾಂಕಃ 07.02.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಪಾಟೀಸವಾಲು ಶ್ರೀ. ಕೆ.ಕೆ.ಆರ್. ವಕೀಲರಿಂದ

ನಾನು ಈ ದಾವೆಯನ್ನು ಹಿಸ್ಸೆ ಕೋರಿ ದಾಖಲು ಮಾಡಿರುತ್ತೇನೆ ಎಂದರೆ ಹೌದು. ದಾವಾ ಸ್ವತ್ತು ಭಾರತ್ ಯುನಿವರ್ಸೆಲ್ ಸೊಸೈಟಿಯ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪ್ರತಿವಾದಿ ಶಂಭುಲಿಂಗ ಹಾಗೂ ಪ್ರಾಂಶುಪಾಲರಾಗಿದ್ದ ಮಂಜುನಾಥ್ ಇಬ್ಬರ ಹೆಸರಿನಲ್ಲಿದ್ದು, ಅವರಿಬ್ಬರ ಸ್ವಾಧೀನದಲ್ಲಿದೆ ಎಂದು ಉತ್ತರಿಸುತ್ತಾರೆ. ದಾವಾ ಸ್ವತ್ತಿನ ಖಾತಾ ವಗೈರಿ ಭಾರತ್ ಯುನಿವರ್ಸೆಲ್ ಸೊಸೈಟಿಯನ್ನು ಪ್ರತಿನಿಧಿಸುವಂತಹ ಕಾರ್ಯದರ್ಶಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನನ್ನ ಗಂಡ ಮಂಜುನಾಥ ಭಾರತ್ ಯುನಿವರ್ಸೆಲ್ ಸೊಸೈಟಿಯಲ್ಲಿ ಪ್ರಾಂಶುಪಾಲರಾಗಿ ಕೆಲಸ ಮಾಡಿದ್ದರು ಎಂದರೆ ಹೌದು.

ನನ್ನ ಗಂಡ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸಿದ ಕಾರಣ ಸಂಸ್ಥೆಯ ವತಿಯಿಂದ ಪ್ರತಿಫಲವನ್ನು ಪಡೆದಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಭಾರತ್ ಯುನಿವರ್ಸೆಲ್ ಸೊಸೈಟಿಯ ಅಧ್ಯಕ್ಷರಾಗಿ ಬಸವರಾಜಯ್ಯನವರು ಕೆಲಸ ಮಾಡಿರುತ್ತಾರೆ. ಈಗ ಯಾರು ಇರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ಶಂಭುಲಿಂಗಪ್ಪನವರನ್ನು ಪ್ರತಿವಾದಿ ಒಂದು ಮತ್ತು ಎರಡು ಎಂದು ಈ ಪ್ರಕರಣದಲ್ಲಿ ಸೇರಿಸಲಾಗಿದೆ ಎಂದರೆ ಹೌದು. ಈ ಪ್ರಕರಣದ ಎರಡನೇ ಪ್ರತಿವಾದಿ ಭಾರತ್ ಯುನಿವರ್ಸೆಲ್ ಸೊಸೈಟಿಯ ಕಾರ್ಯದರ್ಶಿ ಎಂದರೆ ಹೌದು.

ದಾವಾ ಸ್ವತ್ತಿನ ಹಿಸ್ಸೆ ಕುರಿತು ದಾವೆಯನ್ನು ಹೂಡುವ ಮೊದಲು ಭಾರತ್ ಯುನಿವರ್ಸೆಲ್ ಸೊಸೈಟಿಯ ಅಧ್ಯಕ್ಷರು, ಹಾಗೂ ಕಾರ್ಯದರ್ಶಿಯವರೊಂದಿಗೆ ಯಾವ ಪತ್ರ ವ್ಯವಹಾರ ಮಾಡಿರುವುದಿಲ್ಲ.. ಸಾಕ್ಷಿ ಮುಂದುವರೆದು ಮೌಖಿಕವಾಗಿ ಕೇಳಿರುವುದಾಗಿ ಉತ್ತರಿಸುತ್ತಾರೆ. ನನ್ನ ಗಂಡ ಭಾರತ್ ಯುನಿವರ್ಸೆಲ್ ಸೊಸೈಟಿಯಲ್ಲಿ 2005 ನೇ ಸಾಲಿನವರೆಗೆ ಪ್ರಾಂಶುಪಾಲರಾಗಿ ಕೆಲಸ ಮಾಡಿದ್ದರು ಎಂದರೆ ಹೌದು. ಸದರಿ ಸಂಸ್ಥೆಯಲ್ಲಿ ಪ್ರಾಂಶುಪಾಲರ ಹುದ್ದೆ ಜಿಲ್ಲಾ ಶಿಕ್ಷಣ ಸಂಸ್ಥೆಯಿಂದ ಅನುಮೋದನೆ ಹೊಂದಿತ್ತು ಎಂದರೆ ಹೌದು. ಶಿಕ್ಷಣ ಇಲಾಖೆಯ ನಿಯಮಾನುಸಾರ ನನ್ನ ಗಂಡ ಭತ್ಯೆ ಪಡೆಯುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಆಡಳಿತಾತ್ಮಕ ಹುದ್ದೆಯನ್ನು ನಿರ್ವಹಿಸುವಂತಹ ವ್ಯಕ್ತಿಯ ಹೆಸರಿನಲ್ಲಿ ಸಂಸ್ಥೆಯ ದಾಖಲಾತಿಗಳು ಮುಂದುವರೆಯುವುದು ಎಂದರೆ ಸರಿಯಲ್ಲ. ಪದನಾಮದಲ್ಲಿ ದಾಖಲಾತಿಗಳು ಮುಂದುವರೆಯುತ್ತದೆ. ವ್ಯಕ್ತಿಯ ಹೆಸರಿನಲ್ಲಿ ಇರುವುದಿಲ್ಲ.

ನನ್ನ ಗಂಡ ಜೀವಂತವಿದ್ದಾಗ ಸ್ವತ್ತಿನ ದಾಖಲಾತಿಗಳು ನನ್ನ ಗಂಡನ ಹೆಸರಿನಲ್ಲಿ ಹಾಗೂ ಪದನಾಮದಲ್ಲಿ ಅದೇ ರೀತಿಯಾಗಿ ಪ್ರತಿವಾದಿಯ ಹೆಸರಿನಲ್ಲಿ ಹಾಗೂ ಪದನಾಮದಲ್ಲಿ ಇತ್ತು ಎಂದರೆ ಹೌದು. ನನ್ನ ಗಂಡ ಮೃತಪಟ್ಟ ನಂತರ ಭಾರತ್ ಯುನಿವರ್ಸೆಲ್ ಸೊಸೈಟಿಯ ಕಾರ್ಯದರ್ಶಿಯವರ ಹೆಸರಿಗೆ ಕಾರ್ಯಕಾರಿ ಮಂಡಳಿಯ ತೀರ್ಮಾನದಂತೆ ಸ್ವತ್ತಿನ ಖಾತೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಇದೇ ನ್ಯಾಯಾಲಯದಲ್ಲಿ ಅಸಲುದಾವಾ ಸಂಖ್ಯೆ 1/2016 ರ ಪ್ರಕರಣವನ್ನು ನಾನು ನಡೆಸುತ್ತಿದ್ದೇನೆ ಎಂದರೆ ಹೌದು. ಅಸಲುದಾವಾ ಸಂಖ್ಯೆ 1/2016 ರಲ್ಲಿ ಹಕ್ಕು ಘೋಷಣೆ ಹಾಗೂ ಕ್ರಯಪತ್ರಗಳನ್ನು ರದ್ದು ಮಾಡಬೇಕೆಂದು ನಾನು ಪರಿಹಾರ ಕೋರಿರುತ್ತೇನೆ.

ಈ ಪ್ರಕರಣದ ಅನುಸೂಚಿ ಸ್ವತ್ತು ಅಸಲುದಾವಾ ಸಂಖ್ಯೆ 1/2016 ರ ಪ್ರಕರಣದಲ್ಲಿ ದಾವಾ ಸ್ವತ್ತಾಗಿ ಸೇರ್ಪಡೆಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಅನಸೂಚಿ ಸ್ವತ್ತನ್ನು ಮಂಜುನಾಥ್ ಹಾಗೂ ಶಂಭುಲಿಂಗಪ್ಪನವರಿಗೆ ಜಂಟಿಯಾಗಿ ರೇಣುಕರಾಧ್ಯರವರು ಕ್ರಯಪತ್ರದ ಮೂಲಕ ನೀಡಿರುತ್ತಾರೆ . ರೇಣುಕರಾಧ್ಯ ಎಂದರೆ ನನ್ನ ತಂದೆ. 1996 ರಿಂದ 2013-2014 ನೇ ಸಾಲಿನವರೆಗೆ ರೇಣುಕರಾಧ್ಯರವರು ಭಾರತ್ ಯುನಿವರ್‌ಸೆಲ್ ಸೊಸೈಟಿಯ ಕಾರ್ಯಕಾರಿ ಮಂಡಳಿಯ ಉಪಾಧ್ಯಕ್ಷರು, ಹಾಗೂ ಕೆಲವು ಬಾರಿ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿದ್ದರು ಎಂದರೆ ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ನನ್ನ ಗಂಡ ಮೃತಪಟ್ಟ ನಂತರ 2006 ನೇ ಸಾಲಿನಿಂದ 2013-2014 ನೇ ಸಾಲಿನವರೆಗೆ ಭಾರತ್ ಯುನಿವರ್‌ಸೆಲ್ ಸೊಸೈಟಿಯಲ್ಲಿ ಕಾರ್ಯಕಾರಿ ಮಂಡಳಿಯ ಸದಸ್ಯೆಯಾಗಿ ಕೆಲಸ ಮಾಡಿರುತ್ತೇನೆ ಎಂದರೆ ಹೌದು.

ಈ ಪ್ರಕರಣದ ದಾವಾ ಸ್ವತ್ತು ಪೂರ್ವದಿಕ್ಕಿನಲ್ಲಿದ್ದು, ಓ.ಎಸ್. 1/2016 ರ ಸ್ವತ್ತುಗಳು ಪಶ್ಚಿಮ ದಿಕ್ಕಿನಲ್ಲಿ ಇರುತ್ತದೆ. ಅಸಲು ದಾವಾ ಸಂಖ್ಯೆ 1/2016 ರಲ್ಲಿನ ಸ್ವತ್ತು ಸರ್ವೆ ನಮಬರ್ ಸ್ವತ್ತಾಗಿರುತ್ತದೆ. ಓ.ಎಸ್. 1/2016 ರಲ್ಲಿ ವ್ಯವಸಾಯದ ಜಮೀನನ್ನು ಹೊರತುಪಡಿಸಿ ಬೇರೆ ಯಾವುದೇ ವ್ಯವಸಾಯೇತರ ಜಮೀನು ಇರುವುದಿಲ್ಲ.

ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿತ ಕಾರಣ ಮುಂದುವರೆದ ಪಾಟೀಸವಾಲನ್ನು ಮಧ್ಯಾಹ್ನ : 2.45 ಕ್ಕೆ ಮುಂದೂಡಲಾಯಿತು.

**ಸಾಕ್ಷಿಯನ್ನು ಕರೆಸಿ** ಪುನ: **ಪ್ರಮಾಣೀಕರಿಸಲಾಯಿತು** :–

ಮುಂದುವರೆದ ಪಾಟೀಸವಾಲು  ಶ್ರೀ. ಕೆ.ಕೆ.ಆರ್. ವಕೀಲರಿಂದ

ದಾವಾ ಅನಸೂಚಿ ಸ್ವತ್ತುಗಳಲ್ಲಿ ಒಂದು ಕಟ್ಟಡ ಮಾತ್ರ ಇರುತ್ತದೆ. ದಾವಾ ಅನುಸೂಚಿ ಸ್ವತ್ತಿನಲ್ಲಿ ಭಾರತ್ ಎಜುಕೇಷನ್ ಸೊಸೈಟಿಯ ಕಾಲೇಜು ಕಟ್ಟಡ ಇರುತ್ತದೆ. ಕಟ್ಟಡದ ಪೂರ್ವಕ್ಕೆ ರಸ್ತೆ ಇರುತ್ತದೆ. ಪಶ್ಚಿಮಕ್ಕೆ ಉಳಿಕೆ ಜಮೀನು. ಪಶ್ಚಿಮದಿಕ್ಕಿನಲ್ಲಿ ಭಾರತ್ ಎಜುಕೇಷನ್ ಸೊಸೈಟಿಯ ಹೆಣ್ಣುಮಕ್ಕಳ ಹಾಸ್ಟೆಲ್ ಇರುತ್ತದೆ. ಉತ್ತರಕ್ಕೆ ರಸ್ತೆ ಇರುವುದಿಲ್ಲ. ದಕ್ಷಿಣಕ್ಕೆ ಇರುತ್ತದೆ. ಉತ್ತರದಿಕ್ಕಿನಲ್ಲಿ ಸಂಸ್ಥೆಗೆ ಸೇರಿದಂತಹ ಖಾಲಿ ಜಾಗ ಇರುತ್ತದೆ ಎಂದರೆ ಸರಿಯಲ್ಲ. ಭಾರತ್ ಎಜುಕೇಷನ್ ಸೊಸೈಟಿಯ ಕಾಲೇಜು ಕಟ್ಟಡವನ್ನು ರಾಜ್ಯಸಭಾ ಸದಸ್ಯರ ನಿಧಿ ಹಾಗೂ ವಿದ್ಯಾರ್ಥಿಗಳಿಂದ ಪಡೆದ ಕಟ್ಟಡದ ಅಭಿವೃದ್ಧಿ ಶುಲ್ಕದ ನಿಧಿಯಿಂದ ಕಟ್ಟಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ರೇಣುಕಾರಾಧ್ಯರವರು ಭಾರತ್ ಎಜುಕೇಷನ್ ಸೊಸೈಟಿ ಸಂಸ್ಥೆ ಪರವಾಗಿ ಮಂಜುನಾಥ್ ಹಾಗೂ ಶಂಭುಲಿಂಗಪ್ಪನವರಿಗೆ ನಾಲ್ಕು ಗುಂಟೆ ಜಾಗವನ್ನು ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಮುಂದುವರೆದು ಇಬ್ಬರಿಗೂ ವೈಯಕ್ತಿಕವಾಗಿ ಬರೆದುಕೊಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ. ಸಂಸ್ಥೆ ಪರವಾಗಿ ಬರೆದುಕೊಟ್ಟಿರುವುದಿಲ್ಲ. ನಾಲ್ಕು ಗುಂಟೆ ಸ್ವತ್ತು ವಸತಿ ಉದ್ದೇಶಕ್ಕಾಗಿ ಅನ್ಯಸಂಕ್ರಮಣವಾಗಿತ್ತು ಎಂದರೆ ಸಾಕ್ಷಿಯು ಅನ್ಯ ಸಂಕ್ರಮಣವಾಗಿತ್ತು ಎಂದು ಉತ್ತರಿಸುತ್ತಾರೆ. ಸರ್ವೆ ನಂಬರ್ 43/15 ಕಾಲೇಜು ಕಟ್ಟಡ ಇರುವಂತಹ ಸ್ಥಳ ಅನ್ಯಸಂಕ್ರಮಣವಾಗಿರುತ್ತದೆ ಎಂದರೆ ಸರಿಯಲ್ಲ. ಅನ್ಯ ಸಂಕ್ರಮಣವಾಗಿರುವ ಸ್ವತ್ತಿಗಿಂತಲೂ ಹೆಚ್ಚಿನದ್ದಾಗಿ ಭಾರತ್ ಎಜುಕೇಷನ್ ಸೊಸೈಟಿಯವರು ಕಟ್ಟಡ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಭಾರತ್ ಎಜುಕೇಷನ್ ಸೊಸೈಟಿಯವರು ಅನ್ಯಸಂಕ್ರಮಣವಾಗಿರುವ ಸ್ಥಳದಲ್ಲಿ ಕಟ್ಟಿರುವ ಕಟ್ಟಡಗಳನ್ನು ಹಾಗೂ ಅನ್ಯಸಂಕ್ರಮಣವಾಗದೇ ಹೆಚ್ಚಿನ ಜಾಗದಲ್ಲಿ ಕಟ್ಟಿರುವ ಕಟ್ಟಡಗಳ ಬಗ್ಗೆ ವಾದ ಪತ್ರದಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಭಾರತ್ ಎಜುಕೇಷನ್ ಸೊಸೈಟಿ ಸಂಸ್ಥೆಯಲ್ಲಿ ಓದಿರುವಂತಹ ವಿದ್ಯಾರ್ಥಿನಿ ಎಂದರೆ ಹೌದು. ಸಂಸ್ಥೆಯ ಅಧ್ಯಕ್ಷರಾಗಿದ್ದಂತಹ ಬಸವರಾಜಯ್ಯನವರನ್ನು ನಾನು ನೋಡಿರುತ್ತೇನೆ. ಭಾರತ್ ಎಜುಕೇಷನ್ ಸೊಸೈಟಿ ಸಂಸ್ಥೆಯನ್ನು ನಿರ್ಮಾಣ ಮಾಡುವ ಕಾಲಕ್ಕೆ ಬಸವರಾಜಯ್ಯನವರು ಸರ್ಕಾರಿ ನೌಕರರಾಗಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಅದೇ ರೀತಿಯಾಗಿ ನಮ್ಮ ಭಾವ ಶಂಭುಲಿಂಗಪ್ಪ ಸರ್ಕಾರಿ ನೌಕರರಾಗಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಭಾರತ್ ಎಜುಕೇಷನ್ ಸೊಸೈಟಿ ಹೆಸರಿನಲ್ಲಿ ಆಸ್ತಿಯನ್ನು ಖರೀದಿ ಮಾಡುವಾಗ ನನ್ನ ತಂದೆಯವರು ಕುಟುಂಬದ ಹಿರಿಯರಾಗಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಮುಂದುವರೆದು ಭಾರತ್ ಎಜುಕೇಷನ್ ಸೊಸೈಟಿ ಹೆಸರಿನಲ್ಲಿ ಆಸ್ತಿಯನ್ನು ಖರೀದಿ ಮಾಡುವ ವಿಚಾರವೇ ಉದ್ಭವಿಸಿರುವುದಿಲ್ಲ ಎಂದು ಉತ್ತರಿಸುತ್ತಾರೆ.

ಭಾರತ್ ಎಜುಕೇಷನ್ ಸೊಸೈಟಿಯ ಅಧ್ಯಕ್ಷರಾದ ಬಸವರಾಜಯ್ಯ ಹಾಗೂ ಕಾರ್ಯದರ್ಶಿಯಾದ ಶಂಭುಲಿಂಗಪ್ಪನವರು ಕಾರ್ಯಕಾರಿ ಮಂಡಳಿಯ ನಿರ್ದೇಶನದಂತೆ ನನ್ನ ತಂದೆಯವರ ಹೆಸರಿನಲ್ಲಿ ಆಸ್ತಿಗಳನ್ನು ಖರೀದಿ ಮಾಡಿದರು ಎಂದರೆ ಸರಿಯಲ್ಲ. ಸಂಸ್ಥೆಯ ಶೈಕ್ಷಣಿಕ ಉದ್ದೇಶಕ್ಕಾಗಿ ಸರ್ವೆ ನಂಬರ್ 43/2, ಹೊಸ ಸರ್ವೆ ನಂಬರ್ 43/15 ರ 1 ಎಕರೆ 36 ಗುಂಟೆ, ಸರ್ವೆ ನಂಬರ್ 43/1, ಹೊಸ ಸರ್ವೆ ನಂಬರ್ 43/24 ರಲ್ಲಿ 10 ಗುಂಟೆ ಸ್ವತ್ತನ್ನು ಖರೀದಿ ಮಾಡಲಾಗಿತ್ತು ಎಂದರೆ ಸರಿಯಲ್ಲ. ಸ್ವತ್ತುಗಳನ್ನು ಖರೀದಿ ಮಾಡುವ ಕಾಲಕ್ಕೆ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಸರ್ಕಾರಿ ನೌಕರರಾಗಿದ್ದ ಕಾರಣ ನನ್ನ ತಂದೆಯವರ ಹೆಸರಿನಲ್ಲಿ ಆಸ್ತಿಗಳನ್ನು ಖರೀದಿ ಮಾಡಲಾಗಿತ್ತು ಎಂದರೆ ಸರಿಯಲ್ಲ.

ಸಂಸ್ಥೆಯ ಹಿತದೃಷ್ಟಿಯಿಂದ ಖರೀದಿಸಿದಂತಹ ಸ್ವತ್ತುಗಳಾಗಿರುತ್ತದೆ ಹೊರತು ನನ್ನ ತಂದೆಯವರ ಸ್ವಯಾರ್ಜಿತ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯವರ ಹೆಸರಿನಲ್ಲಿ ಶೈಕ್ಷಣಿಕ ಉದ್ದೇಶದಿಂದ ಸ್ವತ್ತುಗಳನ್ನು ಖರೀದಿ ಮಾಡಿದ್ದ ಕಾರಣ ಭಾರತ್ ಎಜುಕೇಷನ್ ಸೊಸೈಟಿಯ ಅಧೀಕ್ಷಕರು ಹಾಗೂ ಕಾರ್ಯದರ್ಶಿಯವರಿಗೆ ನನ್ನ ತಂದೆಯವರು ಜಿಪಿಎ ಮತ್ತು ಎಸ್.ಪಿ.ಎ. ಮೂಲಕ ಸ್ವತ್ತುಗಳನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಖಾತೆ ಬದಲಾವಣೆ ಕುರಿತಂತೆ ಜಿಪಿಎ ಅಧಿಕಾರಕ್ಕೆ ಸಂಬಂಧಪಟ್ಟಂತೆ ಕಾರ್ಯಕಾರಿ ಮಂಡಳಿಯ ತೀರ್ಮಾನದಂತೆ ನನ್ನ ತಂದೆಯವರು ಒಪ್ಪಿ ಸಹಿ ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಗಂಡ ಮೃತಪಟ್ಟ ನಂತರ ದಾವಾ ಸ್ವತ್ತಿನ ಖಾತಾ ನಕಲುಗಳನ್ನು ನಾನು ನೋಡಿರುತ್ತೇನೆ ಆದರೆ ಪರಾಮರ್ಶೆ ಮಾಡಿರುವುದಿಲ್ಲ.

ದಾವಾ ಸ್ವತ್ತಿನ ಖಾತಾ ನಕಲುಗಳು ಭಾರತ್ ಎಜುಕೇಷನ್ ಸೊಸೈಟಿಯನ್ನು ಪ್ರತಿನಿಧಿಸುವಂತಹ ಕಾರ್ಯದರ್ಶಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಸ್ವತ್ತು ಯಾವುದೇ ವೈಕ್ತಿಕ ಹಕ್ಕು ಭಾದ್ಯತೆಗೆ ಒಳಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಭಾರತ್ ಎಜುಕೇಷನ್ ಸೊಸೈಟಿಯಲ್ಲಿ ಅಧೀಕ್ಷಕರಾಗಿ ಹಾಗೂ ಒಂದನೇ ಪ್ರತಿವಾದಿ ಕಾರ್ಯದರ್ಶಿಯಾಗಿದ್ದ ಕಾರಣ ಯಾರಿಗೂ ಸಹಾ ವೈಯಕ್ತಿಕ ಹಕ್ಕು ಭಾದ್ಯತೆಗೆ ಒಳಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ಭಾರತ್ ಎಜುಕೇಷನ್ ಸೊಸೈಟಿಯನ್ನು ಪ್ರತಿನಿಧಿಸುವಂತ ಕಾರ್ಯದರ್ಶಿಯವರಿಗೆ ಹಕ್ಕುಗಳು ನಿಹಿತವಾಗಿರುತ್ತದೆ ಎಂದರೆ ಸರಿಯಲ್ಲ. ಭಾರತ್ ಎಜುಕೇಷನ್ ಸೊಸೈಟಿಯ ಕಟ್ಟಡಗಳನ್ನು ರಾಜ್ಯಸಭಾ ಸದಸ್ಯರ ನಿಧಿಯಿಂದ ಹಾಗೂ ವಿದ್ಯಾರ್ಥಿಗಳಿಂದ ಪಡೆದ ವಂತಿಕೆ ಹಾಗೂ ಸಾರ್ವಜನಿಕರಿಂದ ಪಡೆದ ವಂತಿಕೆಯಿಂದ ಕಟ್ಟಿರುವ ಕಾರಣ ಸಹಕಾರ ಸಂಘಗಳ ಕಾಯ್ದೆ ಅಡಿಯಲ್ಲಿ ವಿಭಜನೆಗೆ ನಾವು ಅರ್ಹರಲ್ಲ ಎಂದರೆ ಸರಿಯಲ್ಲ.

ನಾನು ಹಳ್ಳಿಮೈಸೂರು ಗ್ರಾಮಪಂಚಾಯ್ತಿಗೆ ಆಸ್ತಿಯ ಜಂಟಿ ಖಾತೆ ಮಾಡಬೇಕೆಂದು ಕೋರಿ ಮನವಿ ಕೊಟ್ಟಿದ್ದೆ ಎಂದರೆ ಹೌದು. ನನ್ನ ಮನವಿಯನ್ನು ತಿರಸ್ಕರಿಸಿ ಅಧಿಕಾರಿಗಳು ಭಾರತ್ ಎಜುಕೇಷನ್ ಸೊಸೈಟಿ ಹೆಸರಿನಲ್ಲಿ ಖಾತೆ ವಗೈರೆ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ತಾಲ್ಲೂಕು ನಿರ್ವಹಣಾ ಅಧಿಕಾರಿಗಳು ಸದರಿ ಖಾತೆಗಳನ್ನು ರದ್ದು ಪಡಿಸಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶ ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಕಾರ್ಯನಿರ್ವಹಣಾ ಅಧಿಕಾರಿಗಳ ಆದೇಶವಾದ ನಂತರ ಖಾತೆಗಳಲ್ಲಿ ಏನು ಬದಲಾವಣೆ ಆಗಿರುತ್ತದೆ ಎಂದು ನಾನು ತಿಳಿದುಕೊಂಡಿರುತ್ತೇನೆ ಆದರೆ ಪ್ರತಿಯನ್ನು ನಾನು ಪಡೆದಿರುವುದಿಲ್ಲ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ